**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಸ್ಪೆಷಲ್ ಎಸ್ ಸಿ ಐಪಿಸಿ & ಎಸ್ ಸಿ/ಎಸ್ ಟಿ ನಂಃ 01/2019**

ಪ್ರಾಸಾ:-6 (ಚಾಸಾ :-8)

ಪ್ರಮಾಣೀಕರಿಸಿದ ದಿನಾಂಕಃ-03. 07.2023

| | |
|---|---|
| ಹೆಸರು | : ನರಸಿಂಹಪ್ಪ |
| ತಂದೆಯ ಹೆಸರು | : ಗಂಗಪ್ಪ |
| ವಯಸ್ಸು | : 40 ವರ್ಷ |
| ಕೆಲಸ | : ಕೂಲಿ ಕೆಲಸ |
| ವಾಸ | : ಮೊಗಿಲಹಳ್ಳಿ, ಶ್ರೀನಿವಾಸಪುರ ತಾಲ್ಲೂಕು. |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ವೆಂಕಟೇಶಪ್ಪ, ಲಕ್ಷ್ಮಮ್ಮ, ನಾರಾಯಣಪ್ಪ, ಹರೀಶ್, ರವಿಕುಮಾರ ಗೊತ್ತಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಐದೂ ಜನ ಆರೋಪಿತರು ಗೊತ್ತಿರುತ್ತದೆ. ಅವರು ನಮ್ಮ ಊರಿನವರು ಆಗಿರುತ್ತಾರೆ. ವೆಂಕಟೇಶಪ್ಪನವರ ಮಗ ಶ್ರೀನಾಥ ಗೊತ್ತಿರುತ್ತದೆ. ವೆಂಕಟೇಶಪ್ಪನ ಶ್ರೀನಾಥ ಸತ್ತು 4 ವರ್ಷ ಆಗಿದೆ.

ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಶ್ರೀನಾಥನನ್ನು ಸಾಯಿಸಿದ್ದಾರೆ. 2 ನೇ ಆರೋಪಿ ಅನಂತಪ್ಪನ ಮಗಳು ಮೃತ ಶ್ರೀನಾಥನ ಜೊತೆ ಪ್ರೀತಿ ಇಟ್ಟುಕೊಂಡಿದ್ದಳು. ಆಕೆಯ ಹೆಸರು ಮರೆತಿದ್ದೇನೆ. ಆ ವಿಚಾರ ಆಕೆಯ ಮನೆಯವರಿಗೆ ಗೊತ್ತಾಗಿರುತ್ತದೆ. ಶ್ರೀನಾಥ ನು ಆರೋಪಿತನ ಮನೆಯಲ್ಲಿ ಕೆಲಸ ಮಾಡಲು ಹೋಗುತ್ತಿದ್ದ. ಆರೋಪಿತರಿಗೆ ಈ ವಿಚಾರ ಗೊತ್ತಾಗಿ ಶ್ರೀನಾಥರವರ ಮನೆಯ ಹತ್ತಿರ ಬಂದು ಅವರ ತಂದೆ

ತಾಯಿಯರಿಗೆ ನಿಮ್ಮ ಹುಡುಗ ನಮ್ಮ ಹುಡುಗಿಯನ್ನು ಪ್ರೀತಿ ಮಾಡುತ್ತಿದ್ದಾನೆ ಈ ರೀತಿ ಮಾಡುವುದು ಸರಿಯಲ್ಲ, ಆತನು ಪ್ರೀತಿ ಮಾಡುವುದನ್ನು ಬಿಟ್ಟು ಬಿಡಬೇಕು ಎಂದು ಹೇಳಿಕೊಂಡಿದ್ದರು. ಆದರೂ ಕೂಡ ಅವರಿಬ್ಬರೂ ಪ್ರೀತಿಯನ್ನು ಮುಂದುವರೆಸಿ ಕೊಂಡಿದ್ದರು. 3–4 ದಿವಸ ಅವರಿಬ್ಬರೂ ಫೋನಿನಲ್ಲಿ ಸಂಪರ್ಕ ಇಟ್ಟುಕೊಂಡಿದ್ದರು. ಅನಂತಪ್ಪ ನ ಮನೆಯವರು ಆತನನ್ನುದ್ದೇಶಿಸಿ ನೀನು ಮುಂದುವರೆಸಬೇಡ ಎಂದು, ಹೀಗೆ ಮಾಡಿದರೆ ನಿನ್ನನ್ನು ಸಾಯಿಸುತ್ತೇವೆಂದು ಹೇಳುತ್ತಿದ್ದರು. ಹುಡುಗಿಯ ಕಡೆಯಿಂದ ಪೊನು ಮಾಡಿ ಶ್ರೀನಾಥನನ್ನು ತೋಟದ ಕಡೆಗೆ ಕರೆಸಿಕೊಂಡಿದ್ದಾರೆ. ಕರೆಸಿಕೊಂಡು ಒಂದು ಮರಕ್ಕೆ ಹಗ್ಗ ಹಾಕಿ ನೇಣು ಹಾಕಿ ಸಾಯಿಸಿದ್ದರು. ನಾನು ದೂರ ನಿಂತು ನೋಡಿದಾಗ ಆತನ ದೇಹ ಮರಕ್ಕೆ ನೇತು ಬಿದ್ದಿತ್ತು. ಆ ಜಾಗದಲ್ಲಿ ಆತನ ಚಪ್ಪಲಿಗಳೂ ಕೂಡ ಕೆಳಗಡೆ ಬಿದ್ದಿದ್ದವು . 2–3 ವಾರ ಆದ ನಂತರ ನನಗೆ ಪೊಲೀಸರು ಕೇಳಿದಾಗ ನಾನು ಈ ರೀತಿ ಹೇಳಿದ್ದೆ.

<u>ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ:</u>

ಶ್ರೀನಾಥನು ಸತ್ತಿರುವ ವಿಚಾರವನ್ನು ತಿಳಿದು ನಾನು ಅಲ್ಲಿಗೆ ಹೋದಾಗ ಸುಮಾರು 50–60 ಜನ ಸೇರಿಕೊಂಡಿದ್ದರು. ನಾನು ಮೊದಲು ಆ ಜಾಗಕ್ಕೆ ಹೋದಾಗ ಪೊಲೀಸರು ಬಂದಿರಲಿಲ್ಲ. ನಾನು ಹೋದ ನಂತರ ಇಬ್ಬರು ಪೊಲೀಸರು ಅಲ್ಲಿಗೆ ಬಂದರು. ಪೊಲೀಸರು ಅಲ್ಲಿಗೆ ಬಂದಾಗ ಏನೇನು ನಡೆದಿತ್ತು ಎನ್ನುವ ವಿಚಾರವನ್ನು ನಾನು ಅವರಿಗೆ ಹೇಳಿಲ್ಲ. ಪೊಲೀಸರು ಸ್ಥಳಕ್ಕೆ ಯಾರನ್ನೂ ಬಿಟ್ಟುಕೊಳ್ಳಲಿಲ್ಲ. ಪೊದೆಯಿಂದ ಎಲ್ಲಾ ಜನ ದೂರದಲ್ಲಿ ನಿಂತಿದ್ದರು. ಪೊದೆಯ ಒಳಕ್ಕೆ ಯಾರ್ಯಾರು ಹೋಗಿದ್ದರು ಎಂದು ಮತ್ತು

ಅಲ್ಲಿ ಏನೇನು ಮಾಡಿದ್ದರು ಎಂದು ಹೇಳಲಾಗುವುದಿಲ್ಲ. ನಾನು ಆ ಪೊದೆಯ ಜಾಗಕ್ಕೆ ಹೋದಾಗ ಬೆಳಗ್ಗೆ 7.30 ರಿಂದ 8.00 ಗಂಟೆ ಆಗಿತ್ತು. ನಾನು ಅರ್ಧ ಗಂಟೆಯಿಂದ ಒಂದು ಗಂಟೆ ಕಾಲದವರೆಗೆ ಅಲ್ಲಿ ಇದ್ದೆ. ನಂತರ ನಾನು ವಾಪಸ್ಸು ಮನೆಗೆ ಬಂದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿಲ್ಲ ಈ ದಿವಸ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ.

**ಮರು ವಿಚಾರಣೆಃ ಇಲ್ಲ ಎಂದು ಹೇಳಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-
(ಹೆಚ್.ದೇವರಾಜು)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.